

# ಛಲಗಾತಿ ನವೊಮಿ ಏಷ್ಯಾದ ಟೆನಿಸ್ ರಾಣಿ

**ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಮಹಿಳಾ ಸಿಂಗಲ್ಸ್‌ನಲ್ಲಿ ಪ್ರಶಸ್ತಿ ಜಯಿಸಿದ 22 ವರ್ಷದ ಜಪಾನ್‌ನ ನವೊಮಿ ಒಸಾಕಾ, ಈ ಸಾಧನೆ ಮಾಡಿರುವ ಏಷ್ಯಾದ ಮೊದಲ ಆಟಗಾರ್ತಿ. ಬೆಲಾರಸ್‌ನ ವಿಕ್ಟೋರಿಯಾ ಅಜರೆಂಕಾ ಅವರನ್ನು ಮಣಿಸಿ 'ಏಷ್ಯಾದ ಟೆನಿಸ್ ರಾಣಿ' ಎನಿಸಿಕೊಂಡಿದ್ದಾರೆ.**

**■ ಪ್ರಮೋದ**

ಕತ್ತಲೆ ತುಂಬಿರುವ ಪ್ರತಿ ಸುರಂಗದ ಅಂತ್ಯದಲ್ಲಿ ಬೆಳಕಿರುತ್ತದೆ!

ಈ ಮಾತು ಜಪಾನ್‌ನ ಟೆನಿಸ್ ಆಟಗಾರ್ತಿ ನವೊಮಿ ಒಸಾಕಾ ಅವರಿಗೆ ಸರಿಯಾಗಿ ಅನ್ವಯಿಸುತ್ತದೆ. ಮೂರು ವರ್ಷದವಳಿದ್ದಾಗ ಟೆನಿಸ್ ಅಂಗಳಕ್ಕಿಳಿದಿದ್ದ ಒಸಾಕಾಗೆ ಸಾಲು ಸಾಲು ಸೋಲು, ಮೇಲಿಂದ ಮೇಲೆ ಗಾಯದ ಸಮಸ್ಯೆ. ಗ್ರ್ಯಾನ್ ಸ್ಲಾಂ ಅಂಕಣದಲ್ಲಿ ಟ್ರೋಫಿ ಎತ್ತಿ ಹಿಡಿಯಬೇಕು ಎಂದವರು ಎಳವೆಯಲ್ಲಿ ಕಂಡಿದ್ದ ಕನಸು ಪ್ರತಿ ಟೂರ್ನಿಯ ಆರಂಭಿಕ ಸುತ್ತುಗಳಲ್ಲೇ ಕಮರಿ ಹೋಗುತ್ತಿತ್ತು.

ಒಸಾಕಾ 2015ರಲ್ಲಿ ವಿಂಬಲ್ಡನ್ ಮತ್ತು ಅಮೆರಿಕ ಓಪನ್ ಗ್ರ್ಯಾನ್ ಸ್ಲಾಂ ಟೂರ್ನಿಗಳಲ್ಲಿ ಅರ್ಹತಾ ಹಂತಗಳಲ್ಲಿ ಮುಗ್ಗರಿಸಿದ್ದರು. ಮರು ವರ್ಷ ಆಸ್ಟ್ರೇಲಿಯಾ ಓಪನ್, ಫ್ರೆಂಚ್ ಓಪನ್ ಮತ್ತು ಅಮೆರಿಕ ಓಪನ್ ಟೂರ್ನಿಗಳಲ್ಲಿ ಮೂರನೆಯ ಸುತ್ತು ದಾಟಿ ಹೋಗಲು ಸಾಧ್ಯವಾಗಲಿಲ್ಲ. 2017ರಲ್ಲಿಯೂ ಇದೇ ಸ್ಥಿತಿ. ಗ್ರ್ಯಾನ್ ಸ್ಲಾಂ ಅಂಕಣದಲ್ಲಿ ಸರಣಿ ಸೋಲುಗಳನ್ನು ಕಂಡಿದ್ದ ಒಸಾಕಾ 2018ರ ಅಮೆರಿಕ ಓಪನ್ ಟೂರ್ನಿಯಲ್ಲಿ ನಾಲ್ಕನೇ ಸುತ್ತು ಪ್ರವೇಶಿಸಿದ್ದು ಶ್ರೇಷ್ಠ ಸಾಧನೆಯಾಗಿತ್ತು. ಇದೇ ಟೂರ್ನಿಯಲ್ಲಿ ಚೊಚ್ಚಲ ಟ್ರೋಫಿ ಎತ್ತಿ ಹಿಡಿದಿದ್ದರು. ಮಹಿಳಾ ಸಿಂಗಲ್ಸ್‌ನಲ್ಲಿ 23 ಗ್ರ್ಯಾನ್ ಸ್ಲಾಂ ಟ್ರೋಫಿಗಳನ್ನು ಜಯಿಸಿದ ದಾಖಲೆ ಹೊಂದಿರುವ ಸೆರೆನಾ ವಿಲಿಯಮ್ಸ್ ಅವರನ್ನು ಮಣಿಸಿ ಟೆನಿಸ್ ಲೋಕದ ಗಮನ ಸೆಳೆದಿದ್ದರು.

ಒಸಾಕಾ ಜಯಿಸಿದ ಚೊಚ್ಚಲ ಗ್ರ್ಯಾನ್ ಸ್ಲಾಂ ಟ್ರೋಫಿ ಹಲವು ಮೊದಲುಗಳಿಗೂ ನಾಂದಿಯಾಯಿತು. ಈ ಟ್ರೋಫಿ ಜಯಿಸಿದ ಜಪಾನ್‌ನ ಮೊದಲ ಆಟಗಾರ್ತಿ ಎನ್ನುವ ಹೆಗ್ಗಳಿಕೆಗೆ ಅವರು ಭಾಜನರಾದರು. ನಂತರ ಒಸಾಕಾ ಮುಟ್ಟಿದ್ದೆಲ್ಲ ಚಿನ್ನವೇ ಆಯಿತು. 2019ರಲ್ಲಿ ಆಸ್ಟ್ರೇಲಿಯಾ ಓಪನ್ ಮತ್ತು ಈ ಸಲದ ಅಮೆರಿಕ ಓಪನ್ ಎರಡೂ ಟೂರ್ನಿಗಳ ಸಿಂಗಲ್ಸ್‌ನಲ್ಲಿ ಚಾಂಪಿಯನ್ ಆದರು. ಹ್ಯಾಟ್ರಿಕ್ ಪ್ರಶಸ್ತಿ ಜಯಿಸಿದ ಏಷ್ಯಾದ ಮೊದಲ ಆಟಗಾರ್ತಿ ಎನ್ನುವ ಗೌರವ ಪಡೆದರು. ಚೀನಾದ ಲೀ ನಾ ಎರಡು ಗ್ರ್ಯಾನ್ ಸ್ಲಾಂ ಟೂರ್ನಿಗಳಲ್ಲಿ ಜಯಿಸಿದ್ದು ಏಷ್ಯಾ ರಾಷ್ಟ್ರಗಳ ಸ್ಪರ್ಧಿಗಳ ಇದುವರೆಗಿನ ಶ್ರೇಷ್ಠ ಸಾಧನೆ ಎನಿಸಿತ್ತು.

ಸಾಂಪ್ರದಾಯಿಕ ಮತ್ತು ಸಮರ ಕಲೆಗಳಾದ ಕರಾಟೆ, ಟೇಕ್ವಾಂಡೊ, ಬಾಕ್ಸಿಂಗ್‌ನಲ್ಲಿ ಜಪಾನ್ ಮುಂಚೂಣಿಯಲ್ಲಿದೆ. ಅಲ್ಲಿ ಮೋಟರ್ ಸ್ಪೋರ್ಟ್ಸ್, ಸ್ಕೇಟಿಂಗ್, ಸುಮೊ ಕುಸ್ತಿ, ಬೇಸ್‌ಬಾಲ್, ಫುಟ್‌ಬಾಲ್ ಜನಪ್ರಿಯ. ಟೆನಿಸ್ ಆಡುವವರು ಸಾಕಷ್ಟು ಮಂದಿ ಇದ್ದರೂ ಗ್ರ್ಯಾನ್ ಸ್ಲಾಂ ನಂತಹ ಪ್ರತಿಷ್ಠಿತ ಟೂರ್ನಿಗಳಲ್ಲಿ ಸ್ಪೇನ್, ಅಮೆರಿಕ, ಸ್ವಿಟ್ಜರ್ಲೆಂಡ್, ಸರ್ಬಿಯಾ, ಜೆಕ್ ಗಣರಾಜ್ಯದ ದಿಗ್ಗಜ ಸ್ಪರ್ಧಿಗಳ ಸವಾಲಿಗೆ ಎದೆಯೊಡ್ಡಿ ಪ್ರಶಸ್ತಿಗೆ ಮುತ್ತಿಕ್ಕುವುದು ಅಲ್ಲಿನವರಿಗೆ ಅಸಾಧ್ಯವೆನಿಸಿತ್ತು. ಆದ್ದರಿಂದ 22 ವರ್ಷದ ಜಪಾನ್ ಆಟಗಾರ್ತಿಯ ಈ ಸಾಧನೆ ವಿಶೇಷವೆನಿಸಿದೆ.

## ಅಮೆರಿಕದಲ್ಲಿ ವಾಸ, ತರಬೇತಿ

ಒಸಾಕಾ ತಾಯಿ ಜಪಾನ್‌ನವರು, ತಂದೆ ಲಿಯೊನಾರ್ಡೊ ಫ್ರಾಂಕೋಯಿಸ್ ಹಯಾಟಿ ದೇಶದವರು. ಒಸಾಕಾ ತಮ್ಮ ಅಜ್ಜ–ಅಜ್ಜಿಯ ಬಳಿ ಬೆಳೆದು ಮೂರರ ಹರೆಯದಿಂದಲೇ ಟೆನಿಸ್ ತರಬೇತಿ ಆರಂಭಿಸಿದ್ದರು.

ಫ್ರಾಂಕೋಯಿಸ್ ಅಪ್ಪಟ ಟೆನಿಸ್ ಪ್ರೇಮಿ. ಸೆರೆನಾ ಹಾಗೂ ವೀನಸ್ ವಿಲಿಯಮ್ಸ್ ಸಹೋದರಿಯರ ಆಟಕ್ಕೆ ಮನಸೋತು ತಮ್ಮಿಬ್ಬರೂ